ಸೂರ್ಯೋದಯ: 5:52 ಸೂರ್ಯಾಸ್ತ : 6:59 ಚಂದ್ರೋದಯ: ಬೆ. 5:27 ಚಂದ್ರಾಸ್ತ: ಸಂ. 7:10 | ಮಂಗಳವಾರದ ಉಷ್ಣಾಂಶ : ಗರಿಷ್ಠ 37° ಕನಿಷ್ಠ 23°

ಬುಧವಾರದ ಉಷ್ಣಾಂಶ 36° ಗರಿಷ್ಠ 23° ಕನಿಷ್ಠ | ಗುರುವಾರ 36° : 23° | ಶುಕ್ರವಾರ 35° : 22° | ಶನಿವಾರ 34° : 22°

ಬುಧವಾರ • ಜುಲೈ 15, 2026

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ಜಿಲ್ಲೆಯಲ್ಲಿ ಬುಧವಾರ ಮೋಡ ಮುಸುಕಿದ ವಾತಾವರಣ

ಸಂಭ್ರಮದ ಮಣ್ಣೆತ್ತಿನ ಪೂಜೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರ ಹಾಗೂ ತಾಲ್ಲೂಕಿನಲ್ಲಿ ಮಂಗಳವಾರ ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಮಣ್ಣಿನ ಎತ್ತುಗಳ ಪೂಜೆ ಸಂಭ್ರಮದಿಮದ ನೆರವೇರಿಸಲಾಯಿತು.

ಜೇಡಿ ಮಣ್ಣನ್ನು ತಂದು ಅದಕ್ಕೆ ಜೋಡಿ ಎತ್ತುಗಳ ರೂಪ ನೀಡಿ, ಕೋಡುಗಳಿಗೆ ಹಾಗೂ ಮೈಗೆ ಬಣ್ಣ ಹಚ್ಚಲಾಯಿತು. ದೇವರ ಜಗುಲಿ ಹಾಗೂ ಕಟ್ಟೆಯ ಮೇಲೆ ಅವುಗಳನ್ನಿಟ್ಟು ಪುಷ್ಪಗಳಿಂದ ಅಲಂಕರಿಸಿ ಕಾಯಿ ಕರ್ಪೂರ ಹಾಗೂ ನೈವೇದ್ಯ ಅರ್ಪಿಸಲಾಯಿತು.

ಹೋಳಿಗೆ, ಪಾಯಸ, ಚಪಾತಿ, ಅನ್ನ ಸಿದ್ಧಪಡಿಸಿ ಕುಟುಂಬ ಸಮೇತರಾಗಿ ಸಿಹಿ ಊಟ ಸವಿಯಲಾಯಿತು. ಕೆಲವರು ನೆಂಟರಿಷ್ಟರನ್ನು, ಸ್ನೇಹಿತರನ್ನು ಊಟಕ್ಕೆ ಆಹ್ವಾನಿಸಿದ್ದರು. ಕೆಲ ಗ್ರಾಮಗಳಲ್ಲಿ ಸಂಜೆ ಮಣ್ಣೆತ್ತುಗಳ ಮೆರವಣಿಗೆಯೂ ನಡೆಯಿತು.

ಬಸವಕಲ್ಯಾಣ ತಾಲ್ಲೂಕಿನ ಶಿವಪುರದ ವಿಜಯಕುಮಾರ ಪಾಟೀಲ ಅವರ ನಿವಾಸದಲ್ಲಿ ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ದಂಪತಿಗಯಿಂದ ಪೂಜೆ ನಡೆಸಲಾಯಿತು

'ಮಣ್ಣೆತ್ತಿನ ಅಮಾವಾಸ್ಯೆ ರೈತಾಪಿ ವರ್ಗದ ಪ್ರಮುಖ ಹಬ್ಬವಾಗಿದೆ. ನಮ್ಮ ಕುಟುಂಬದವರು ಮೊದಲಿನಿಂದಲೂ ಪ್ರತಿವರ್ಷ ಮಣ್ಣೆತ್ತಿನ ಪೂಜೆ ನಡೆಸುತ್ತಾರೆ. ಆದ್ದರಿಂದ ನಮ್ಮ ಮನೆಯಲ್ಲೂ ತಪ್ಪದೇ ಪೂಜೆ ನಡೆಸುತ್ತೇವೆ' ಎಂದು ಶಿವಪುರದ ವಿಜಯಕುಮಾರ ಪಾಟೀಲ ತಿಳಿಸಿದರು.

'ಈ ಸಲ ಮಳೆ ಇಲ್ಲ. ಜೇಡಿ ಮಣ್ಣಿನ ಕೆಸರು ಸಿಗಲಿಲ್ಲ. ಆದ್ದರಿಂದ ಮಾರುಕಟ್ಟೆಯಲ್ಲಿನ ಸಿದ್ಧ ಮಣ್ಣೆತ್ತುಗಳನ್ನು ತಂದು ಪೂಜೆ ನೆರವೆರಿಸಲಾಯಿತು' ಎಂದು ಪ್ರತಾಪುರದ ಸಿದ್ದಪ್ಪ ಮತ್ತು ರೇವಣಪ್ಪ ಮಂಠಾಳ ಹೇಳಿದರು.

ಮಳೆ ಕೊರತೆ: ಬೆಳೆ ಉಳಿಸಿಕೊಳ್ಳಲು ಹರಸಾಹಸ

ನೀರು ಖರೀದಿಸಿ ತೋಟಗಾರಿಕೆ ಬೆಳೆಗಳಿಗೆ ಹಾಯಿಸುವ ಪರಿಸ್ಥಿತಿ ನಿರ್ಮಾಣ

• ಮನ್ಮಥಪ್ಪ ಸ್ವಾಮಿ

ಔರಾದ್: ಮುಂಗಾರು ಮಳೆ ಕೈಕೊಟ್ಟ ಪರಿಣಾಮ ತಾಲ್ಲೂಕಿನ ರೈತರು ತೀವ್ರ ಸಂಕಷ್ಟಕ್ಕೆಸಿಲುಕಿದ್ದಾರೆ.

ಜೂನ್ ಅಂತ್ಯದ ವೇಳೆಗೆ ಆಶಾದಾಯಕವಾಗಿದ್ದ ಕೃಷಿ ಚಟುವಟಿಕೆಗಳು ಜುಲೈನಲ್ಲಿ ಮಳೆ ಕೊರತೆಯಿಂದ ಹಿನ್ನಡೆಯಾಗಿದ್ದು, ಬಿತ್ತನೆ ಮಾಡಿದ ಸೋಯಾಬಿನ್, ತೊಗರಿ, ಉದ್ದು, ಹೆಸರು ಸೇರಿದಂತೆ ವಿವಿಧ ಬೆಳೆಗಳು ಒಣಗಲಾರಂಭಿಸಿವೆ. ತೋಟಗಾರಿಕೆ ಬೆಳೆಗಳನ್ನು ಉಳಿಸಿಕೊಳ್ಳಲು ರೈತರು ನೀರು ಖರೀದಿಸಿ ಹಾಯಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಜೂನ್ ಕೊನೆಯ ವಾರ ಹಾಗೂ ಜುಲೈ ಮೊದಲ ವಾರ ಬಿತ್ತನೆಯಾದ ಬೆಳೆಗಳು ಮಣ್ಣಿನಲ್ಲಿ ತೇವಾಂಶ ಇಲ್ಲದೆ ಬಾಡುತ್ತಿವೆ. ಮಳೆ ಇನ್ನೂ ಕೆಲವು ದಿನ ಸುರಿಯದಿದ್ದರೆ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆ ನಷ್ಟವಾಗುವ ಸಾಧ್ಯತೆ ಇದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಚಂಡು ಹೂ, ತರಕಾರಿ ಹಾಗೂ ಕಬ್ಬು ಬೆಳೆದ ರೈತರು ಕೊಳವೆಬಾವಿಗಳಿಂದ ನೀರು ಹಾಯಿಸುವುದು, ಹನಿ ನೀರಾವರಿ ವ್ಯವಸ್ಥೆ ಬಳಸುವುದು, ಟ್ಯಾಂಕರ್ ಮೂಲಕ ನೀರು ಖರೀದಿಸುವುದು ಸೇರಿದಂತೆ ವಿವಿಧ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಕೆಲವರು ಬೆಳೆ ಚೇತರಿಕೆಗೆ ಯೂರಿಯಾ ಹಾಗೂ ನೀರಿನಲ್ಲಿ ಕರಗುವ ಗೊಬ್ಬರ ಸಿಂಪಡಿಸುತ್ತಿದ್ದರೂ, ಮಳೆ ಇಲ್ಲದೆ ಅದರ ಪರಿಣಾಮ ಸೀಮಿತವಾಗಿದೆ.

ನೀರು ಖರೀದಿಸಿ ಬೆಳೆ ಉಳಿಸುವ ಪ್ರಯತ್ನ: ನಾಗೂರ (ಬಿ) ಗ್ರಾಮದ ರೈತ ಸಂತೋಷ ಮಸ್ಕಲೆ ಎರಡು ಎಕರೆ ಜಮೀನಿನಲ್ಲಿ ಸುಮಾರು 10 ಸಾವಿರ ಚಂಡು ಹೂ ಗಿಡಗಳನ್ನು ನಾಟಿ ಮಾಡಿದ್ದು, ಇದುವರೆಗೆ ₹50 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡಿದ್ದಾರೆ. ಮಳೆ ಕೊರತೆಯಿಂದ ಗಿಡಗಳು ಬಾಡುತ್ತಿರುವ ಕಾರಣ ಪಕ್ಕದ ರೈತರಿಂದ ಹಣ ನೀಡಿ ನೀರು ಖರೀದಿಸಿ ವಾರಕ್ಕೊಮ್ಮೆ ಹಾಯಿಸುತ್ತಿದ್ದಾರೆ. 'ಇನ್ನೆರಡು ದಿನಗಳಲ್ಲಿ ಮಳೆಯಾಗದಿದ್ದರೆ ನೀರು ಸಿಗುವುದೇ ಕಷ್ಟವಾಗುತ್ತದೆ. ಹಲವು ತಿಂಗಳ ಶ್ರಮ ಮತ್ತು ಮಾಡಿದ ಹೂಡಿಕೆ ಮಣ್ಣುಪಾಲಾಗುವ ಭಯ ಕಾಡುತ್ತಿದೆ' ಎಂದು ಅವರು ಹೇಳಿದರು.

ಅದೇ ಗ್ರಾಮದ ರೈತ ಶ್ರೀಕಾಂತರೆಡ್ಡಿ ಅವರ ನಾಲ್ಕು ಎಕರೆ ಕಬ್ಬು ಹಾಗೂ ಒಂದು ಎಕರೆ ಚಂಡು ಹೂ ಬೆಳೆಗೂ ನೀರಿನ ಅಭಾವ ಎದುರಾಗಿದೆ. 'ಕೊಳವೆಬಾವಿಯಲ್ಲೂ ನೀರಿನ ಪ್ರಮಾಣ ಕಡಿಮೆಯಾಗಿದೆ. ವಿದ್ಯುತ್ ಪೂರೈಕೆಯೂ ಸಮರ್ಪಕವಾಗಿಲ್ಲ. ಬೆಳೆ ಉಳಿಸಿಕೊಳ್ಳುವುದೇ ಕಷ್ಟವಾಗಿದೆ. ಕೃಷಿಯ ಮೇಲಿನ ನಂಬಿಕೆ ಕಳೆದುಕೊಳ್ಳುವಂತಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದ ಬೆಳೆ ನಷ್ಟದ ಆತಂಕ
- ದೈಹಿಕ ಶ್ರಮ ಮತ್ತು ಹೂಡಿಕೆ ಮಣ್ಣುಪಾಲಾಗುವ ಭಯ
- ಕೊಳವೆಬಾವಿಗಳಲ್ಲೂ ಅಂತರ್ಜಲದ ಪ್ರಮಾಣ ಕುಸಿತ

ಪ್ರಜಾವಾಣಿ ವಿಶೇಷ

ಔರಾದ್ ತಾಲ್ಲೂಕಿನ ಜೇರ್ಗಾ (ಬಿ) ರೈತರು ಮಳೆ ಕೊರತೆ ನೀಗಿಸಲು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಿರುವುದು

ಔರಾದ್ ತಾಲ್ಲೂಕಿನ ನಾಗೂರ ರೈತ ಸಂತೋಷ ಮಸ್ಕಲೆ ಚಂಡು ಹೂ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವುದು

'ಜುಲೈನಲ್ಲಿ ಶೇ 53ರಷ್ಟು ಮಳೆ ಕೊರತೆ'

ಮಾರ್ತಂಡ

'ಜೂನ್ ತಿಂಗಳಲ್ಲಿ ಬಿತ್ತನೆಗೆ ಬೇಕಾದಷ್ಟು ಮಳೆಯಾಗಿದ್ದರೂ, ಜುಲೈನಲ್ಲಿ ಶೇ.53ರಷ್ಟು ಮಳೆ ಕೊರತೆಯಾಗಿದೆ. ನೀರಾವರಿ ಸೌಲಭ್ಯ ಹೊಂದಿರುವ ರೈತರು ಹನಿ ನೀರಾವರಿ ಪದ್ಧತಿ ಬಳಸಬೇಕು. ಬೆಳೆ ಚೇತರಿಕೆಗೆ ಶೇ.2ರಷ್ಟು 19:19:19 ನೀರಿನಲ್ಲಿ ಕರಗುವ ಗೊಬ್ಬರ ಸಿಂಪಡಿಸಬೇಕು. ಎಡೆ ಹೊಡೆಯುವುದರಿಂದ ಮಣ್ಣಿನಲ್ಲಿ ತೇವಾಂಶ ಹೆಚ್ಚು ಕಾಲ ಉಳಿಯಲು ಸಹಕಾರಿಯಾಗುತ್ತದೆ' ಎಂದು ಔರಾದ್ ಸಹಾಯಕ ಕೃಷಿ ನಿರ್ದೇಶಕ ಮಾರ್ತಂಡ ಸಲಹೆ ನೀಡಿದರು.

'ಸರ್ಕಾರ ತಕ್ಷಣ ನೆರವಿಗೆ ಬರಲಿ'

ಶ್ರೀಮಂತ ಬಿರಾದಾರ

ಔರಾದ್ ಹಾಗೂ ಕಮಲನಗರ ಭಾಗದ ರೈತರು ಮಳೆ ಆಧಾರಿತ ಕೃಷಿಯನ್ನೇ ನಂಬಿದ್ದಾರೆ. ಈ ಬಾರಿ ಮುಂಗಾರು ಕೈಕೊಟ್ಟ ಪರಿಣಾಮ ಬೆಳೆಗಳು ಒಣಗುತ್ತಿವೆ. ಸರ್ಕಾರ ತಕ್ಷಣ ಬೆಳೆ ಹಾನಿ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರ ಘೋಷಿಸಬೇಕು. ರೈತರ ಸಾಲ ಮನ್ನಾ ಸೇರಿದಂತೆ ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು' ಎಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಶ್ರೀಮಂತ ಬಿರಾದಾರ ಆಗ್ರಹಿಸಿದ್ದಾರೆ.

ಮಾನಭಂಗಕ್ಕೆ ಯತ್ನ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಹುಲಸೂರ: ತಾಲ್ಲೂಕಿನ ಗ್ರಾಮವೊಂದರಲ್ಲಿ ಮಹಿಳೆಯ ಮನೆಗೆ ಅಕ್ರಮವಾಗಿ ಪ್ರವೇಶಿಸಿ ಮಾನಭಂಗಕ್ಕೆ ಯತ್ನಿಸಿದ ಆರೋಪದಡಿ ವ್ಯಕ್ತಿಯೊಬ್ಬನ ವಿರುದ್ಧ ಹುಲಸೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸರ ಮಾಹಿತಿ ಪ್ರಕಾರ, 28 ವರ್ಷದ ಮಹಿಳೆ ತಮ್ಮ ಮೂವರು ಮಕ್ಕಳೊಂದಿಗೆ ಮನೆಯಲ್ಲಿದ್ದರು. ಜುಲೈ 10ರಂದು ರಾತ್ರಿ ಮಹಿಳೆಯ ಪತಿ ಹೊರಗಡೆ ತೆರಳಿದ್ದರೆ, ಅತ್ತೆ ದೇವಸ್ಥಾನದಲ್ಲಿ ಭಜನೆ ಕಾರ್ಯಕ್ರಮಕ್ಕೆ ಹೋಗಿದ್ದರು.

'ರಾತ್ರಿ ಸುಮಾರು 11 ಗಂಟೆ ವೇಳೆ ಮಹಿಳೆ ಹಾಗೂ ಮಕ್ಕಳು ಮನೆಯಲ್ಲಿ ಮಲಗಿದ್ದಾಗ, ಆರೋಪಿಯು ಮನೆಗೆ ಅಕ್ರಮವಾಗಿ ಪ್ರವೇಶಿಸಿ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಲು ಯತ್ನಿಸಿದ್ದಾನೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಈ ವೇಳೆ ಮಹಿಳೆ ಪ್ರತಿರೋಧ ವ್ಯಕ್ತಪಡಿಸಿದ್ದು, ಮಕ್ಕಳು ಜೋರಾಗಿ ಚೀರಾಡಿದ ಹಿನ್ನೆಲೆಯಲ್ಲಿ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ ಎನ್ನಲಾಗಿದೆ.

ರಾತ್ರಿ ಸುಮಾರು 11.30ಕ್ಕೆ ಮಹಿಳೆಯ ಪತಿ ಹಾಗೂ ಅತ್ತೆ ಮನೆಗೆ ಮರಳಿದ ಬಳಿಕ ನಡೆದ ಘಟನೆಯ ಕುರಿತು ಮಹಿಳೆ ಮಾಹಿತಿ ನೀಡಿದ್ದಾರೆ. ನಂತರ ಕುಟುಂಬ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ ಹುಲಸೂರ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ.

ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಕಲಂ 74, 76 ಹಾಗೂ 329(4)ರಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅಪರಾಧ ಸುದ್ದಿ



ಭಾಲ್ಕಿ ತಾಲ್ಲೂಕಿನ ಕೇಸರ ಜವಳಗಾ ಗ್ರಾಮದಲ್ಲಿ ಡಿ.ಕೆ.ಸಿದ್ರಾಮ ಅವರು ಎಸ್‌ಐಆರ್‌ನ ಎನ್ಯುಮರೇಷನ್ ಫಾರ್ಮ್ ಭರ್ತಿ ಮಾಡಿ ಮತಗಟ್ಟೆ ಅಧಿಕಾರಿಗಳಿಗೆ ಸಲ್ಲಿಸಿದರು

ಎಸ್‌ಐಆರ್ ಯಶಸ್ವಿಗೆ ಸಹಕರಿಸಿ: ಸಿದ್ರಾಮ

ಪ್ರಜಾವಾಣಿ ವಾರ್ತೆ

ಭಾಲ್ಕಿ: 'ತಾಲ್ಲೂಕಿನ ಪ್ರತಿಯೊಬ್ಬ ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಬೇಕು. ಎಸ್‌ಐಆರ್ ಯಶಸ್ವಿಗೆ ಪ್ರತಿಯೊಬ್ಬರು ಸಹಕಾರ ನೀಡಬೇಕು' ಎಂದು ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ಡಿ.ಕೆ. ಸಿದ್ರಾಮ ಹೇಳಿದರು.

ತಾಲ್ಲೂಕಿನ ಕೇಸರ ಜವಳಗಾ ಗ್ರಾಮದಲ್ಲಿ ಮಂಗಳವಾರ ಎಸ್‌ಐಆರ್‌ನ ಭರ್ತಿ ಮಾಡಿದ ಎನ್ಯುಮರೇಷನ್ ಫಾರ್ಮ್ ಮತಗಟ್ಟೆ ಅಧಿಕಾರಿಗಳಿಗೆ ಸಲ್ಲಿಸಿ ಮಾತನಾಡಿ, 'ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಈ ಪ್ರಕ್ರಿಯೆ ಪಾರದರ್ಶಕವಾಗಿ ಯಶಸ್ವಿಗೆ ಸಾರ್ವಜನಿಕರು ಸಹಕಾರ ನೀಡಬೇಕು.

ಪರಿಷ್ಕರಣೆಗಾಗಿ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಭೇಟಿ ಮಾಡಿದ ಸಂದರ್ಭದಲ್ಲಿ ಮತದಾರರು ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಅಗತ್ಯವಾಗಿ ನೀಡುವುದರ ಜತೆಗೆ ಭರ್ತಿ ಮಾಡಿದ ಅರ್ಜಿಗಳನ್ನು ಪರಿಶೀಲಿಸಿ ಕೊಳ್ಳಬೇಕು. ನಿಖರ ಹಾಗೂ ದೋಷರಹಿತ ನವೀಕೃತ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶದಿಂದ ಎಲ್ಲ ಮತದಾರರು ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ಸಹಕರಿಸಬೇಕು' ಎಂದು ಡಿ.ಕೆ.ಸಿದ್ರಾಮ ಮನವಿ ಮಾಡಿದರು.

ಔರಾದ್ ಶಾಸಕ ಪ್ರಭು ಚವಾಣ್ ಅವರು ಸುಂದಾಳ ಗ್ರಾಮದಲ್ಲಿ ಎಸ್‌ಐಆರ್ ಜಾಗೃತಿ ನಡೆಸಿದರು

ವಿವಿಧ ಗ್ರಾಮಗಳಲ್ಲಿ ಎಸ್‌ಐಆರ್ ಜಾಗೃತಿ

ಪ್ರಜಾವಾಣಿ ವಾರ್ತೆ

ಔರಾದ್: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಂಗಳವಾರ ಶಾಸಕ ಪ್ರಭು ಚವಾಣ್ ಅವರು ಎಸ್‌ಐಆರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು.

ತಾಲ್ಲೂಕಿನ ದುಧಕನಾಳ, ವನಮಾರಪಳ್ಳಿ, ಬಾದಲಗಾಂವ, ನಾರಾಯಣಪುರ, ಮಮದಾಪುರ, ಅಲ್ಲಾಪುರ, ತೇಗಂಪುರ, ಯನಗುಂದಾ, ಖಾಶೆಂಪುರ, ಸುಂಧಾಳ, ಜಕನಾಳ, ನಂದ್ಯಾಳ, ಮಾನೂರ(ಕೆ), ನಾಗಮಾರಪಳ್ಳಿ, ಕರಂಜಿ(ಬಿ), ಕರಂಜಿ(ಕೆ), ರಾಯಪಳ್ಳಿ, ನಾಗನಪಲ್ಲಿ, ಚಿಂತಾಕಿ, ಇಟಗ್ಯಾಳ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಜನಜಾಗೃತಿ ಮೂಡಿಸಿದರು.

'ಅರ್ಹ ಮತದಾರರು ಅಗತ್ಯ ದಾಖಲೆಗಳೊಂದಿಗೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು' ಎಂದು ಮನವಿ ಮಾಡಿದ ಅವರು; 'ಎಸ್‌ಐಆರ್ ಪ್ರಕ್ರಿಯೆ ಮಂದಗತಿಯಲ್ಲಿ ನಡೆಯುತ್ತಿರುವ ಕಡೆ ಅಧಿಕಾರಿಗಳಿಗೆ ತ್ವರಿತವಾಗಿ ಕಾರ್ಯ ಪೂರ್ಣಗೊಳಿಸುವಂತೆ ಸೂಚಿಸಿದರು. ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಅರ್ಹ ಮತದಾರರಿಂದ ಅರ್ಜಿ ಸಲ್ಲಿಕೆಗೆ ನೆರವಾಗಬೇಕು' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿವಾಜಿರಾವ ಪಾಟೀಲ, ರಾಮಶೆಟ್ಟಿ ಪನ್ನಾಳೆ, ಪ್ರವೀಣ ಕಾರಬಾರಿ, ಖಂಡೋಬಾ ಕಂಗಟೆ, ರಾಮ ರೆಡ್ಡಿ, ರವೀಂದ್ರ ರೆಡ್ಡಿ, ಜಗದೀಶ ಪಾಟೀಲ, ಶಿವಕಾಂತ ಮಜಗೆ, ಶರಣಪ್ಪ ಪಾಟೀಲ, ರಾವಸಾಬ್ ಪಾಟೀಲ, ನಾಗನಾಥ ಮೋರ್ಗೆ ಸೇರಿದಂತೆ ಇತರರು ಹಾಜರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆ : ಉಚಿತ ತರಬೇತಿಗೆ ಅರ್ಜಿ

ಬೀದರ್: ಎಲ್ಲಾ ತರಹದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು 50 ದಿನಗಳ ತರಬೇತಿಯನ್ನು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಿದೆ.

ಆಸಕ್ತರು ಜು. 21ರೊಳಗಾಗಿ ಬೆಳಿಗ್ಗೆ 10ರಿಂದ ಸಂಜೆ 4.30ರ ವರೆಗೆ ತಮ್ಮ ಹೆಸರು ನೋಂದಣಿ ಮಾಡಿಸಬಹುದು. ದೂರವಾಣಿ ಸಂಖ್ಯೆ: 0821-2515944ಗೆ ಸಂಪರ್ಕಿಸಬಹುದು ಎಂದು ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ನವೀನ್‌ಕುಮಾರ್ ಎಸ್.ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೆನರಾ ಬ್ಯಾಂಕ್ Canara Bank Syndicate

ಬಸವಕಲ್ಯಾಣ-2 ಶಾಖೆ, ಬಸವಕಲ್ಯಾಣ ಜಿ॥ ಬೀದರ-585327.

ತಗಾದೆ ಸೂಚನೆ

ದಿನಾಂಕ: 17-02-2026ರಂದು ಜಾರಿ ಮಾಡಲಾದ ತಗಾದೆ ನೋಟೀಸುನ್ನು ರದ್ದುಪಡಿಸಲಾಗಿದೆ. ಈ ನೋಟೀಸು ಹೊಸದಾಗಿ ಜಾರಿಮಾಡಲಾಗಿದೆ.

ಗೆ: ದಿನಾಂಕ: 01-07-2026

1) ಶ್ರೀಮತಿ. ಗುರಮ್ಮ ಗಂಡ ಕಮಲ ರೆಡ್ಡಿ (ಸಾಲಗಾರರು)
ಟಿಎಮ್‌ಸಿ ಸಂಖ್ಯೆ: 25-283 (ಹಳೆ), 25-307(ಹೊಸ), ಹೀರೆಮಠ ಕಾಲೋನಿ, ಗಾಂಧಿ ನಗರ, ಬೈಪಾಸ ಹಿಂದುಗಡೆ, ಹುಮನಾಬಾದ, ಜಿ॥ ಬೀದರ-585330.

ಮಾನ್ಯರೇ,

ವಿಷಯ: ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002ರ ಸೆಕ್ಷನ್ 13(2) ಅಡಿಯಲ್ಲಿ ತಗಾದೆ ಸೂಚನೆ

ಅದಾಗ್ಯೂ, ಶ್ರೀಮತಿ. ಗುರಮ್ಮ ಗಂಡ ಕಮಲ ರೆಡ್ಡಿ ರವರು ಕಾಲಕಾಲಕ್ಕೆ ನಮ್ಮ ಭಾಲ್ಕಿ ಶಾಖೆಯಿಂದ ಕೆಳಕಂಡ ಸಾಲಗಳನ್ನು/ಸಾಲ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ:

ಸಾಲ ಖಾತೆ ಸಂಖ್ಯೆ	ಸಾಲ ಮೊತ್ತ	ಬಾಕಿರುವ ಮೊತ್ತ ದಿಂದ 28-06-2026	ಬಡ್ಡಿ ದರ
HL 07029360001106	Rs. 10,00,000.00/-	6,80,574.00/-	8.45% + 2.00%

ಷರತ್ತುಗಳು ಮತ್ತು ನಿಬಂಧನೆಗಳ ಮೇರೆಗೆ ನೀವು ನಿಮ್ಮ ಹೊಣೆಗಾರಿಕೆಯನ್ನು ನೆರವೇರಿಸಲು ವಿಫಲರಾಗಿರುವುದರಿಂದ, ನಿಮ್ಮ ಸಾಲದ ಖಾತೆಯನ್ನು 02/02/2026 ರಂದು ಬ್ಯಾಂಕ್‌ನಿಂದ ಎನ್‌ಪಿಎ ಎಂದು ವರ್ಗೀಕರಣ ಮಾಡಲಾಗಿದೆ. ಆದ್ದರಿಂದ, ಸದರಿ ವಿಷಯಕ್ಕೆ ಸಂಬಂಧಿತ ಕಾಯ್ದೆಯ ಸೆಕ್ಷನ್ 13(2) ಅಡಿಯಲ್ಲಿ ನಾವು ನಿಮಗೆ ಈ ನೋಟಿಸ್ ಹೊರಡಿಸುತ್ತಿದ್ದು, ಸದರಿ ನೋಟಿಸ್ ದಿನಾಂಕದಿಂದ ಅರವತ್ತು ದಿನಗಳೊಳಗೆ ನೀವು ಸಂಪೂರ್ಣ ಹೊಣೆಗಾರಿಕೆಯ ಬಾಕಿಮೊತ್ತ **ರೂ. 6,82,036.00/- (ರೂಪಾಯಿ ಆರು ಲಕ್ಷ ಎಂಭತ್ತೆರೆಡು ಸಾವಿರದ ಮೂವತ್ತಾರು ಮಾತ್ರ)** ಜೊತೆಗೆ ತಗುಲಿದ ಬಡ್ಡಿ ಹಾಗೂ ತಹಲ್ ದಿನಾಂಕದವರೆಗಿನ ಬಡ್ಡಿಶುಲ್ಕವನ್ನು ಪಾವತಿಸಿ ನಿಮ್ಮ ಹೊಣೆಗಾರಿಕೆಯನ್ನು ಬಿಡುಗಡೆ ಮಾಡಿಕೊಳ್ಳಬೇಕೆಂದು ಕರೆ ನೀಡ